# ನಮ್ಮೊಳಗಿನ ಎರಡು ಜಗತ್ತುಗಳು



## ವಸಾಹತು ಪ್ರಜ್ಞೆಯ ವಿಶ್ವರೂಪ

ಪ್ರೊ.ಎಸ್. ಎನ್. ಬಾಲಗಂಗಾಧರ

ಪ್ರೊ. ಎಸ್. ಎನ್. ಬಾಲಗಂಗಾಧರ ಮೂಲತಃ ಬೆಂಗಳೂರಿನವರು. ಕಳೆದ 25 ವರ್ಷಗಳಿಂದ ಬೆಲ್ಜಿಯಂನಲ್ಲಿ ನೆಲೆಸಿದ್ದಾರೆ. ಬೆಲ್ಜಿಯಂನ ಗೆಂಟ್ ವಿಶ್ವವಿದ್ಯಾಲಯದ ಸಂಸ್ಕೃತಿಗಳ ತುಲನಾತ್ಮಕ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ಪಿಎಚ್‌ಡಿ ಮಹಾಪ್ರಬಂಧ 'ಸ್ಮೃತಿ-ವಿಸ್ಮೃತಿ:ಭಾರತೀಯ ಸಂಸ್ಕೃತಿ' ಹೆಸರಿನಲ್ಲಿ ಕನ್ನಡಕ್ಕೆ ಅನುವಾದಗೊಂಡಿದೆ. ಭಾರತೀಯ ಸಂಸ್ಕೃತಿ ಕುರಿತಾಗಿರುವ ತಪ್ಪು ತಿಳಿವಳಿಕೆಗಳನ್ನು ಕೂಲಂಕಷ ಅಧ್ಯಯನಕ್ಕೊಳಪಡಿಸಿರುವ ಅವರು, ಭಾರತೀಯ ಸಂಸ್ಕೃತಿಯ ಪುನರ್‌ಪರಿಶೀಲನೆಗೆ ಒಂದು ರೀತಿಯ ಆಂದೋಲನಕ್ಕೇ ನಾಂದಿ ಹಾಡಿದ್ದಾರೆ. ಶಿವಮೊಗ್ಗದ ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ ಇವರ ಕನಸಿನ ಕೂಸು.

**ಭಾ**ರತೀಯ ವಿದ್ಯಾವಂತರಲ್ಲಿ ಇರಬಹುದಾದ ಎರಡು ಜಗತ್ತುಗಳ ಕುರಿತು ಗಮನ ಹರಿಸೋಣ: ಒಂದು ಜಗತ್ತು ಸಾಂಪ್ರದಾಯಿಕವಾಗಿ ನಾವು ಬೆಳೆದು ಬಂದದ್ದು. ಅಲ್ಲಿ ನಮ್ಮ ಅಪ್ಪ ಅಮ್ಮ, ಬಂಧು-ಬಳಗ, ನೆರೆ-ಹೊರೆಯವರು ನಮಗೆ ಈ ಪ್ರಪಂಚದಲ್ಲಿ ಹೇಗೆ ವ್ಯವಹರಿಸಬೇಕೆಂಬುದನ್ನು ಕಲಿಸಿರುತ್ತಾರೆ. ಅನೇಕ ಆಚರಣೆಗಳನ್ನು, ಆಲೋಚನಾ ಕ್ರಮವನ್ನು ಒಳಗೊಂಡ ಜೀವನ ಶೈಲಿಯನ್ನು ಕಲಿಸಿರುತ್ತಾರೆ.

ನಂತರ ವಿದ್ಯಾವಂತರಾದಂತೆಲ್ಲ ಮತ್ತೊಂದು ಜಗತ್ತಿಗೆ ತೆರೆದುಕೊಳ್ಳುತ್ತೇವೆ. ಅದು ನಮ್ಮ ಆಧುನಿಕ ಶಿಕ್ಷಣ ಪರಿಚಯಿಸುವ ವಿಚಾರಗಳ ಜಗತ್ತು. ನಮ್ಮ ಕುಟುಂಬ, ಜಾತಿ ಮುಂತಾದ ಸಾಂಪ್ರದಾಯಿಕ ಸಮಾಜದಾಚೆಗೆ ಇರಬಹುದಾದ ಸಾರ್ವಜನಿಕ ಜಗತ್ತು ಇಂಥ ವಿಚಾರಗಳ ತಳಹದಿ ಮೇಲೆ ನಿರ್ಮಾಣವಾಗಿದೆ. ಹಾಗಾಗಿ ಅದು ನಮಗೆಲ್ಲ ಒಂದು ಆದರ್ಶ ಮಾದರಿ ಎಂದುಕೊಂಡಿರುತ್ತೇವೆ.

ಅದಕ್ಕೆ ಪೂರಕವಾಗಿ ಆ ಜಗತ್ತು ನಮ್ಮ ಸಾಂಪ್ರದಾಯಿಕ ಜಗತ್ತಿನ ಕುರಿತು ಕೆಲವು ನಿರ್ದಿಷ್ಟ ಧೋರಣೆಗಳನ್ನು ಬೆಳೆಸುತ್ತಿರುತ್ತದೆ. ಉದಾಹರಣೆಗೆ ಭಾರತೀಯ ಸಮಾಜ ವ್ಯವಸ್ಥೆಯು ಜಾತಿ ಪದ್ಧತಿಯೆಂಬ ಅಮಾನವೀಯ ತಳಹದಿಯ ಮೇಲೆ ನಿಂತಿದೆ, ಶತಶತಮಾನಗಳಿಂದ ಸ್ತ್ರೀಯರನ್ನು ಹಾಗೂ ಕೆಳಜಾತಿಗಳನ್ನು ಶೋಷಿಸುತ್ತಿದೆ, ಈ ಜನರು ಆಚರಿಸುವ ಗೊಡ್ಡು ಸಂಪ್ರದಾಯಗಳು ಅನಾರೋಗ್ಯಕರ ಹಾಗೂ ಅವೈಜ್ಞಾನಿಕ ಇತ್ಯಾದಿ. ಒಟ್ಟಿನಲ್ಲಿ ನಾವು ಇದುವರೆಗೆ ಬೆಳೆದು ಬಂದ ಜಗತ್ತು ಸರಿಯಿಲ್ಲ, ಅದು ಈ ಹೊರ ಜಗತ್ತನ್ನು ಅನುಕರಿಸಿ ತನ್ನ ದೋಷಗಳನ್ನು ತಿದ್ದಿಕೊಳ್ಳಬೇಕು, ಅದನ್ನು ತಿದ್ದುವುದು ಈ ಹೊರ ಜಗತ್ತಿನ ಕುರಿತು ಜಾಗೃತಿ ಹೊಂದಿದ ವಿದ್ಯಾವಂತನ ಕರ್ತವ್ಯ ಎಂಬ ಧೋರಣೆಯನ್ನು ಈ ಎರಡನೆಯ ಜಗತ್ತು ಬೆಳೆಸುತ್ತದೆ.

ಸೋಜಿಗವೆಂದರೆ, ನಾವು ಯಾರೂ ಬಾಲ್ಯದಲ್ಲಿ ಮೊದಲನೆಯ ಜಗತ್ತನ್ನು ದೋಷಪೂರ್ಣ, ಅಪೂರ್ಣ ಎಂಬುದಾಗಿ ಅನುಭವಿಸುತ್ತ ಬದುಕುವುದಿಲ್ಲ. ಅಲ್ಲಿ ಸುಖ-ದುಃಖಗಳೂ, ಹತಾಶೆ, ಅತೃಪ್ತಿ, ಕ್ರೌರ್ಯ-ಹಿಂಸೆಗಳೂ ಅನುಭವಕ್ಕೆ ಬಂದಿರಬಹುದು. ಆದರೆ ಆ ಕಾರಣಕ್ಕೆ ನಮ್ಮ ಆಚರಣೆಗಳು ಕೆಟ್ಟವು, ಅವು ನಮ್ಮ ಪೂರ್ವಿಕರು ಹಾಗೂ ಬಂಧುಗಳ ಮೌಢ್ಯ ಎಂಬ ಭಾವನೆಯಿಂದ ಅದನ್ನು ನಾವು ಬದುಕಿರುವುದಿಲ್ಲ. ಇಂಥ ಆಚರಣೆಗಳನ್ನು ನಡೆಸುವ ಸಮಾಜವು ತನ್ನದೇ ಪುಣ್ಯ-ಪಾಪ, ನ್ಯಾಯಾನ್ಯಾಯ, ಧರ್ಮಾಧರ್ಮದ ವಿವೇಕವನ್ನೂ ಕಲಿಸಿದೆ. ಇಂಥ ಕಲ್ಪನೆಗಳಿಗೂ ಹೊರತಾಗಿ ನಮ್ಮ ಬದುಕಿನ ಪರಮ ಸಂಭ್ರಮದ ಕ್ಷಣಗಳೂ ಅವುಗಳಲ್ಲಿರುತ್ತವೆ. ಇಂಥ ಅನುಭವಗಳು ಕಳೆದುಹೋದ ಕಾಲದ್ದಲ್ಲ, ನಮ್ಮ ವೈಚಾರಿಕ ಜಗತ್ತಿನ ಜೊತೆಜೊತೆಗೇ ಅಸ್ತಿತ್ವದಲ್ಲಿರುವಂಥವು.

ತಮ್ಮ ಬಾಲ್ಯದ ಇಂಥ ಸಂಭ್ರಮದ ಅನುಭವಗಳನ್ನು ಕನ್ನಡದ ಸುಪ್ರಸಿದ್ಧ ಬರಹಗಾರರು ತಮ್ಮ ಆತ್ಮಕಥನಗಳಲ್ಲಿ ಕೂಡ ದಾಖಲಿಸಿದ್ದಾರೆ. ಆದರೆ ಇಂಥವರಿಗೆ ಮತ್ತೊಂದು ಜಗತ್ತಿನ ಪರಿಚಯವಾದ ತಕ್ಷಣ ಅವರ ಹಳೆಯ ಜಗತ್ತಿನ ಅನುಭವಗಳೆಲ್ಲ ಬೇರೆಯದೇ ಸತ್ಯಗಳನ್ನು ತಿಳಿಸಲು ತೊಡಗುತ್ತವೆ. ಅಂಥ ಬರೆಹಗಾರರು ಮೊದಲು ನಾನು ಅದರಲ್ಲೇ ಬದುಕಿದ್ದರೂ ನನಗಿದೆಲ್ಲ ತಿಳಿದೇ ಇರಲಿಲ್ಲ, ಇಂಥದೊಂದು ಪುಸ್ತಕವನ್ನು ಓದಿದ ನಂತರ/ಇಂಥವರ ಮಾತನ್ನು ಕೇಳಿದ ನಂತರ ನಾನು ಬೆಳೆದ ಸಮಾಜದ ನಿಜಸ್ವರೂಪವೇನು (ಅದರ ಅನಿಷ್ಟಗಳು, ಮೌಢ್ಯ, ಶೋಷಣೆ ಇತ್ಯಾದಿ) ಎಂಬುದು ಅರಿವಾಯಿತು. ಅಷ್ಟರ ನಂತರ ಈ ಪದ್ಧತಿಗಳೆಲ್ಲ ತೊಲಗಿದ ಹೊರತೂ ನಾವು ಉದ್ಧಾರವಾಗುವುದಿಲ್ಲ ಎಂಬುದು ತಿಳಿಯಿತು ಎಂಬಂಥ ಹೇಳಿಕೆಗಳನ್ನು ಮಾಡುತ್ತಾರೆ. ಹೀಗೆ ಈ ಎರಡನೆಯ ಜಗತ್ತಿಗೆ ಪ್ರವೇಶಿಸುವುದೆಂದರೆ ಮೊದಲು ಸುಳ್ಳುಗಳಲ್ಲಿ ಬದುಕಿದ್ದೆವು ಈಗ ನಿಜ ತಿಳಿದಿದೆ ಎಂಬ ಜ್ಞಾನೋದಯ ಪಡೆಯುವ ಕೆಲಸ.

ಮತ್ತೊಂದು ಜಗತ್ತು ನಮ್ಮನ್ನು ಆಕ್ರಮಿಸಿಕೊಂಡ ನಂತರ ವಿಭಿನ್ನ ರೀತಿಯಲ್ಲಿ ನಾವು ಅದಕ್ಕೆ ಪ್ರತಿಕ್ರಿಯಿಸಬಹುದು:

1) ಬಹುತೇಕರು ಇದನ್ನೊಂದು ಸಮಸ್ಯೆಯಾಗಿ ಮಾಡಿಕೊಳ್ಳದೇ ಈ ಎರಡು ಜಗತ್ತುಗಳಲ್ಲೂ ಸಲೀಸಾಗಿ ಈಜಾಡುವುದನ್ನು ರೂಢಿಸಿಕೊಳ್ಳುತ್ತಾರೆ.

2) ಇನ್ನೂ ಕೆಲವರು ಮೊದಲನೆಯ ಜಗತ್ತಿನ ಕುರಿತು ರಕ್ಷಣಾತ್ಮಕ ನಿಲುವು ತಳೆಯುತ್ತಾರೆ. ಎರಡನೆಯ ಜಗತ್ತಿನ ಪರಿಭಾಷೆಗಳನ್ನೇ ಉಪಯೋಗಿಸಿ ತಮ್ಮದು ಮೌಢ್ಯವಲ್ಲ, ವೈಜ್ಞಾನಿಕ ಎಂದು ಸಾಧಿಸಲು ಅವರು ಪ್ರಯತ್ನಿಸಬಹುದು. ಇಲ್ಲ ಅದು ಮಾಡುವ ಟೀಕೆಗಳನ್ನು ಪರಿಗಣಿಸಿ ಸಂಪ್ರದಾಯವನ್ನು ಸುಧಾರಿಸುವ ಯುಕ್ತಿಯೂ ಅವರಲ್ಲಿ ಮೂಡಬಹುದು.

3) ಮತ್ತೂ ಕೆಲವರು ಮೊದಲನೆಯ ಜಗತ್ತನ್ನು ಸಂಪೂರ್ಣವಾಗಿ ಇಲ್ಲ ಭಾಗಶಃ ಅಲ್ಲಗಳೆಯತೊಡಗುತ್ತಾರೆ. ಮೊದಲ ಜಗತ್ತನ್ನು ಅನುಭವಿಸುವಾಗ, ಅಥವಾ ಅದರಲ್ಲಿ ಭಾಗವಹಿಸುವಾಗ ಅರೆಮನಸ್ಸು ಬರುತ್ತದೆ. ಅದರಲ್ಲಿ ತೊಡಗಿಕೊಂಡಾಗ ಅದರ ವಿರುದ್ಧ ಯುದ್ಧ ಸಾರುವುದು ಪ್ರಜ್ಞಾವಂತರ ಕರ್ತವ್ಯ ಎಂಬ ಭಾವ ಮೂಡುತ್ತದೆ.

ಒಟ್ಟಿನಲ್ಲಿ ಮೊದಲನೆಯ ಜಗತ್ತಿನ ಅನುಭವದಿಂದ ಉದ್ದೇಶಪೂರ್ವಕವಾಗಿ ಬಿಡಿಸಿಕೊಳ್ಳುವ ಅಥವಾ ಕಳಚಿಕೊಳ್ಳುವ ಪ್ರಕ್ರಿಯೆ ನಡೆಯುತ್ತದೆ. ಕಳಚಿಕೊಳ್ಳಲಾಗದೇ ತೋರಿಕೆ, ಇಬ್ಬಂದಿತನಗಳು ಬೆಳೆಯುತ್ತವೆ. ಇಲ್ಲ ಅದಕ್ಕೆ ವೈಚಾರಿಕತೆಯನ್ನು ಆರೋಪಿಸಿ ಸಮರ್ಥಿಸಿಕೊಳ್ಳುವ, ಇಲ್ಲವೇ ಅನಾಸಕ್ತರಾಗಿ ತಾವೊಂದೇ ಅದರಿಂದ ಕಳಚಿಕೊಂಡು ನೈತಿಕವಾಗಿ ನಿಟ್ಟುಸಿರು ಬಿಡುವ, ಇಲ್ಲ ತಮ್ಮ ಬಂಧುಗಳ ಮನಸ್ಸನ್ನು ನೋಯಿಸಲಾರದೇ ಅವರಿಗಾಗಿ ನಾಟಕ ಮಾಡಿ ಇಲ್ಲ ತ್ಯಾಗ ಮಾಡಿ ಧನ್ಯರಾಗುವ, ನಾನಾ ರೀತಿಯ ಉದಾಹರಣೆಗಳು ನಮಗೆ ಕನ್ನಡ ಬರವಣಿಗೆಯ ಲೋಕದಲ್ಲಿ ಚಿರಪರಿಚಿತ.

ಆದರೆ ಇವರ ಈ ಎಲ್ಲ ದೊಂಬರಾಟಗಳಿಗೂ ಅತೀತವಾಗಿ ಆ ಮೊದಲಿನ ಜಗತ್ತು ತನ್ನಷ್ಟಕ್ಕೆ ಮುಂದುವರಿದುಕೊಂಡು ಹೋಗುತ್ತಿರುತ್ತದೆ. ಎರಡನೆಯ ಜಗತ್ತನ್ನು ಕೂಡ ತಿರಸ್ಕರಿಸದೇ ತನ್ನದೊಂದು ಆಭರಣದಂತೆ ಅದನ್ನು ಧರಿಸಿ ಸಾಗುವುದೊಂದೇ ಅದರ ಕೆಲಸ. ಹಾಗಾಗಿ ಒಮ್ಮೆ ಬದಲಾದ ಹಾಗೆ ಕಾಣಿಸುತ್ತದೆ, ಮತ್ತೆ ತನ್ನ ಕಬಂಧ ಬಾಹುಗಳ ನಿಜ ಸ್ವರೂಪವನ್ನು ದರ್ಶಿಸುತ್ತದೆ. ಇದನ್ನು ಬದಲಾಯಿಸಹೊರಟ ಚಳವಳಿಕಾರರು ಹತಾಶರಾಗಿ ಕೈಚೆಲ್ಲುತ್ತಾರೆ, ರಾಜಿ ಮಾಡಿಕೊಳ್ಳುತ್ತಾರೆ, ಇಬ್ಬಂದಿತನ ರೂಢಿಸಿಕೊಳ್ಳುತ್ತಾರೆ, ದ್ವೀಪವಾಗುತ್ತಾರೆ, ಇಲ್ಲ ತಾವೇ ಪಳಗಿ ಅದರೊಳಗೆ ಸೇರಿಕೊಳ್ಳುತ್ತಾರೆ. ನಮ್ಮ ಈ ಸಮಾಜವನ್ನು ತಿದ್ದಲು ಯಾರಿಗೂ ಸಾಧ್ಯವಿಲ್ಲ, ನೋಡಿ, ಬುದ್ಧ ಬಂದ, ಬಸವ ಬಂದ... ಏನಾಯಿತು? ಎಂಬ ಹೇಳಿಕೆ ನಮಗೆಲ್ಲ ಸತ್ಯವಾಗಿಬಿಟ್ಟಿದೆ. ಭಾರತೀಯ ಸಮಾಜವು ವಿದ್ಯಾವಂತರ ವಿಚಾರಗಳಿಗೆ ಹಾಗೂ ಕಾರ್ಯಕ್ರಮಗಳಿಗೆ ಒಗ್ಗಲಾರೆನೆಂದು ಹಟ ಹಿಡಿದಂತೆ ವಿಚಾರವಾದಿಗಳಿಗೆ ಕಾಣುತ್ತದೆ.

ಆದರೆ ಸಮಾಜದ ದೃಷ್ಟಿಯಿಂದ ನೋಡಿ, ಬೇರೆಯದೇ ಸತ್ಯವೊಂದು ಗೋಚರಿಸುತ್ತದೆ: ಜನರ ಅನುಭವವನ್ನು ನಿಜವೆಂದು ಪರಿಗಣಿಸಿ ಅದನ್ನಾಧರಿಸಿ ಈ ಸಮಾಜದ ಸ್ವರೂಪವನ್ನು ತಿಳಿದುಕೊಳ್ಳಲು ವೈಚಾರಿಕ ಜಗತ್ತು ನಿರಾಕರಿಸುತ್ತಿದೆ. ಇದರ ಪರಿಣಾಮಗಳನ್ನು ಇಂಥ ಫಜೀತಿಗಳ ರೂಪದಲ್ಲಿ ನಾವು ಅನುಭವಿಸುತ್ತಿಲ್ಲವೆಂದು ಹೇಗೆ ಹೇಳುತ್ತೀರಿ? ಏಕೆಂದರೆ ನಮ್ಮ ವೈಚಾರಿಕ ಜಗತ್ತು ನಮ್ಮ ಕುರಿತು ಪಾಶ್ಚಾತ್ಯರ ಅನುಭವವನ್ನು ಹಾಗೂ ಪ್ರಶ್ನೆಗಳನ್ನು ಆಧರಿಸಿ ಹುಟ್ಟಿಕೊಂಡ ಚಿತ್ರಣಗಳನ್ನು ಆಧರಿಸಿದೆ. ಇದು ಮೂಢನಂಬಿಕೆ, ಇದು ಸಮಾಜವಿರೋಧಿ, ಇಂಥ ಪರಿಕಲ್ಪನೆಗಳೆಲ್ಲ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ನಿರ್ದಿಷ್ಟ ಇತಿಹಾಸವನ್ನೂ, ಅರ್ಥವನ್ನೂ ಹೊಂದಿವೆ. ಅದನ್ನು ತಿಳಿದುಕೊಳ್ಳುವ ಗೋಜಿಗೇ ಹೋಗದೇ, ಅಥವಾ ಅದರ ಅರಿವೇ ಇಲ್ಲದೆ ಅಂಥ ಶಬ್ದಗಳನ್ನು ಯರ್‍ರಾಬಿರ್‍ರಿಯಾಗಿ ಅನುವಾದಿಸಿಕೊಂಡು ನಮ್ಮ ಸಮಾಜವನ್ನು ವರ್ಣಿಸುತ್ತಿರುತ್ತೇವೆ.

ಎಲ್ಲಾದರೂ ಜನರ ಅನುಭವದ ಕುರಿತು ಚರ್ಚೆಗಳನ್ನೆತ್ತಿದರೆ ಅದೊಂದು ಪಾಪವೋ ಎಂಬಂತೆ, ಅನೈತಿಕ ಕೆಲಸವೊ ಎಂಬಂತೆ, ಇಲ್ಲ ಪಟ್ಟಭದ್ರ ಹಿತಾಸಕ್ತಿಗಳ ಹುನ್ನಾರವೋ ಎಂಬಂತೆ ಅದನ್ನು ಬದಿಗೊತ್ತಲಾಗುತ್ತದೆ. ಪಾಶ್ಚಾತ್ಯ ಚಿತ್ರಣಗಳನ್ನೇ ಸತ್ಯವೆಂಬುದಾಗಿ ನಂಬಿಕೊಂಡು ನಮ್ಮ ಅನುಭವವನ್ನು ಆ ಚಿತ್ರಣಗಳ ಬೆಳಕಿನಲ್ಲಿ ವಿಕಾರವಾಗಿ ಜೋಡಿಸಿಕೊಳ್ಳುವಂತೆ ಮಾಡುವುದೇ ವಸಾಹತು ಪ್ರಜ್ಞೆ. ವಸಾಹತು ಪ್ರಜ್ಞೆ ಎಂಬುದಾಗಿ ಏಕೆ ಕರೆಯುತ್ತಿದ್ದೇವೆಂದರೆ, ಬ್ರಿಟಿಷರ ಸಾಮ್ರಾಜ್ಯದಿಂದ ವಸಾಹತುವಿನ ದಾಸರು ಪಡೆದ ಬಳುವಳಿ ಅದು. ವಸಾಹತು ಪ್ರಜ್ಞೆಯು ನಮ್ಮ ಅನುಭವದ ಕುರಿತು ಆಲೋಚಿಸದಂತೆ ತಡೆಯುತ್ತದೆ.

ಅಂದರೆ ನಮ್ಮ ಬಾಲ್ಯದ ಅನುಭವವು ನಿಜವಾಗಿದ್ದರೂ ಅದು ನಮ್ಮ ಅಜ್ಞಾನದಿಂದ ಹುಟ್ಟಿರುವುದರಿಂದ ಅದನ್ನು ಆಧರಿಸಿ ನಮ್ಮ ಸಾಮಾಜಿಕ ಚಿಂತನೆಯನ್ನು ನಡೆಸುವಂತಿಲ್ಲ ಎಂಬುದಾಗಿ ವೈಚಾರಿಕ ಜಗತ್ತು ಭಾವಿಸುತ್ತದೆ. ಸಮಾಜದ ಕುರಿತು ನಾವು ವೈಚಾರಿಕ ವಿವರಣೆಗಳನ್ನು ಬೆಳೆಸಬೇಕಾದರೆ ಈ ಜನರ ಅನುಭವಗಳನ್ನು ಅಲ್ಲಗಳೆಯುವುದು ಅನಿವಾರ್ಯ. ಅದರಲ್ಲಿ ತಪ್ಪೇನಿದೆ? ಪ್ರಪಂಚದ ಕುರಿತ ನಮ್ಮ ಅಜ್ಞಾನವನ್ನು ಕಳೆದುಕೊಳ್ಳುವುದೇ ಶಿಕ್ಷಣದ ಗುರಿ. ದಿನವೂ ಸೂರ್ಯನೇ ಭೂಮಿಯ ಸುತ್ತ ತಿರುಗುತ್ತಿರುವುದನ್ನು ನೋಡಿದರೂ ಭೂಮಿಯೇ ಸೂರ್ಯನ ಸುತ್ತ ತಿರುಗುತ್ತಿದೆ ಎಂಬ ಸತ್ಯವನ್ನು ನಾವು ಶಿಕ್ಷಣದಿಂದಲೇ ಕಲಿತಿದ್ದಲ್ಲವೆ? ಹಾಗಾಗಿ ನಮ್ಮ ಅನುಭವಕ್ಕೆ ವ್ಯತಿರಿಕ್ತವಾಗಿರುವ ಇಂಥ ಸಂಗತಿಗಳೇಕೆ ಸತ್ಯವಾಗಿರಬಾರದು? ಎಂಬ ಪ್ರಶ್ನೆಯೂ ಏಳಬಹುದು.

ಆದರೆ ಇಂಥ ವೈಜ್ಞಾನಿಕ ಸತ್ಯಗಳನ್ನು ನಮ್ಮ ತರ್ಕಕ್ಕೆ ಸುಸಂಬದ್ಧವಾಗುವಂತೆ ವಿವರಿಸಿರುತ್ತಾರೆ ಎಂಬುದನ್ನೂ ನೆನಪಿಡಬೇಕು. ನಮ್ಮನ್ನು ಪೋಷಿಸಿ ಬದುಕಿಗೆ ಹಚ್ಚಿಸಿದ ಸಮಾಜವನ್ನು ಏಕೆ ಅಮಾನವೀಯ ಎಂಬುದಾಗಿ ತಿಳಿಯಬೇಕು, ನಮಗೆ ವ್ಯವಹಾರವನ್ನು ಹಾಗೂ ಯೋಚಿಸುವುದನ್ನು ಹೇಳಿಕೊಟ್ಟ ಹಿರಿಯರನ್ನು ಏಕೆ ಮೂಢರೆಂದು ತಿಳಿಯಬೇಕು, ಎಂಬುದನ್ನು ಎಲ್ಲೂ ವೈಜ್ಞಾನಿಕವಾಗಿ ವಿವರಿಸಿಲ್ಲ. ಯಾವ ಸ್ಪಷ್ಟೀಕರಣಗಳನ್ನೂ ನೀಡದೇ ಅವುಗಳನ್ನು ಸತ್ಯವೆಂಬಂತೆ ನಮಗೆ ನೀಡಲಾಗುತ್ತದೆ. ಕಳೆದ ನೂರಾರು ವರ್ಷಗಳಿಂದ ಭಾರತೀಯ ಸಮಾಜದ ಕುರಿತು ನಡೆಸಿಕೊಂಡು ಬಂದ ಚಿಂತನೆ ಹಾಗೂ ಚರ್ಚೆಗಳೆಲ್ಲವೂ ಇಂಥ ಸಮಾಜಶಾಸ್ತ್ರವನ್ನು ಆಧರಿಸಿದ ತಿಳಿವಳಿಕೆಗಳೇ.

ಒಂದು ಸಮಾಜದ ಸಮಸ್ಯೆಯೆಂದರೆ ಜನರ ಸಮಸ್ಯೆಯೇ ಆಗಿದ್ದಲ್ಲಿ ಈ ಕುರಿತು ಎರಡು ಪ್ರಶ್ನೆಗಳಂತೂ ಎದ್ದೇ ಏಳುತ್ತವೆ: 1) ನಮ್ಮ ಜನರು ಎದುರಿಸುತ್ತಿರುವ ಸಮಸ್ಯೆಯ ಸ್ವರೂಪವೇನೆಂಬುದನ್ನು ತಿಳಿದುಕೊಳ್ಳುವ ಕೆಲಸವನ್ನು ನಿಜವಾಗಿಯೂ ಮಾಡುತ್ತಿದ್ದೇವೆಯೆ? 2) ನಮ್ಮ ಜನರ ಸಮಸ್ಯೆಗಳೆಂದು ನಾವು ನಡೆಸುತ್ತಿರುವ ಬಗೆಹರಿಯದ ಚರ್ಚೆ, ಚಿಂತನ-ಮಂಥನಗಳಲ್ಲಿ ಬೌದ್ಧಿಕ ಜಗತ್ತು ಸೃಷ್ಟಿಸಿಕೊಂಡದ್ದೆಷ್ಟು? ನೈಜ ಸಮಸ್ಯೆಗಳೆಷ್ಟು? ಈ ಎರಡೂ ಪ್ರಶ್ನೆಗಳಿಗೆ ನಕಾರಾತ್ಮಕ ಉತ್ತರವೇ ಬಂದ ಪಕ್ಷದಲ್ಲಿ ಮತ್ತೊಂದು ಪ್ರಶ್ನೆ ಏಳುತ್ತದೆ: ಇಂಥ ವಸಾಹತು ಪ್ರಜ್ಞೆಯಿಂದ ರೂಪಿತವಾದ ಚಿಂತನೆಯ ಅನಾಹುತಗಳೇನು?

ಇಂದು ಭಾರತೀಯ ವಿದ್ಯಾವಂತರ ಜೀವನದಲ್ಲಿ ಪ್ರಚಲಿತದಲ್ಲಿರುವ ಚರ್ಚೆಗಳನ್ನೇ ಉದಾಹರಿಸಿ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬಹುದು. ವಸಾಹತು ಪ್ರಜ್ಞೆಯು ಹುಟ್ಟುಹಾಕುವ ಇಂಥ ಚರ್ಚೆಯನ್ನು ನಡೆಸುತ್ತಿರುವಾಗ ಮತ್ಯಾವುದೋ ಜಗತ್ತಿನ ಸಮಸ್ಯೆಗಳನ್ನು ನಮ್ಮಲ್ಲಿದೆ ಎಂಬುದಾಗಿ ಭಾವಿಸಿಕೊಂಡು ಚರ್ಚಿಸುತ್ತಿರುತ್ತೇವೆ. ವಸಾಹತು ಪ್ರಜ್ಞೆಯ ಅವಾಂತರಗಳನ್ನು ಗುರುತಿಸುತ್ತ ಅವುಗಳ ಪರಾಮರ್ಶೆ ನಡೆಸಿದರೆ ಮಾತ್ರವೇ ಅಂಥ ಬೌದ್ಧಿಕ ಸಮಸ್ಯೆಗಳಿಂದ ಹೊರಬರುವ ಮಾರ್ಗಗಳು ಗೋಚರಿಸಬಹುದು ಹಾಗೂ ನಮ್ಮ ಸಮಾಜದಲ್ಲಿರುವ ಸಮಸ್ಯೆಗಳ ನೈಜ ಸ್ವರೂಪವನ್ನು ತಿಳಿಯಬಹುದು. ಆ ಕಾರಣಕ್ಕಾಗಿ ಈ ಅಂಕಣವನ್ನು ವಸಾಹತು ಪ್ರಜ್ಞೆಯ ವಿಶ್ವರೂಪ ಎಂಬುದಾಗಿ ಹೆಸರಿಸಲಾಗಿದೆ.



ಕನ್ನಡ ನಿರೂಪಣೆ: ರಾಜಾರಾಮ ಹೆಗಡೆ

(ಕುವೆಂಪು ವಿಶ್ವವಿದ್ಯಾಲಯದ ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರದ ನಿರ್ದೇಶಕರು)

(ಓದುಗರ ಗಮನಕ್ಕೆ: ಗಣೇಶ ಯಲ್ಲಾಪುರ ಅವರ 'M ಪವರ್' ಅಂಕಣ ಇನ್ನುಮುಂದೆ 'ವಿತ್ತವಾಣಿ' ಪುರವಣಿಯಲ್ಲಿ ಪ್ರಕಟವಾಗುತ್ತದೆ.)